

ಕೆಳಗಿಟ್ಟಿದ್ದ ಅಮ್ಮನ ವ್ಯಾನಿಟಿ ಬ್ಯಾಗು ಕಣ್ಣಿಗೆ ಬಿತ್ತು. ಅಕ್ಕ ಯಥಾಪ್ರಕಾರ ಹೊರಗೆ ಕೂತು ಓದುತ್ತಿದ್ದಳು. ಅಮ್ಮನ ಬ್ಯಾಗು ಮುಟ್ಟುವುದು ನಾವೆಂದೂ ಮಾಡಬಾರದ ಕೆಲಸವಾಗಿತ್ತು. ಏನಾದರೂ ಬೇಕಿದ್ದರೆ ಅಕ್ಕ ಅಮ್ಮನನ್ನು ಕೇಳಿದರೆ, ಅವಳಿಗೆ ಬ್ಯಾಗು ತರಲು ಹೇಳುತ್ತಿದ್ದರು, ಅವರೇ ತೆಗೆದುಕೊಡಬೇಕಿತ್ತು. ನಾನು ಗೆಜ್ಜೆ ಸದ್ದು ಮಾಡದೆ ಹಾಗೆ ಮೆಲ್ಲಮೆಲ್ಲ ಹೆಜ್ಜೆ ಹಾಕಿ ಹೋಗಿ, ಅವರ ಬ್ಯಾಗ್ ತೆಗೆದೆ. ಅವರ ಶಾಲೆಯಲ್ಲಿ ಏನಾದರೂ ಕಾರ್ಯಕ್ರಮವಿದ್ದಲ್ಲಿ, ಅಮ್ಮ ಯಾವ ತರಗತಿಗೆ ಕ್ಲಾಸ್ ಟೀಚರ್ ಆಗಿದ್ದರೋ ಆ ತರಗತಿಯ ಮಕ್ಕಳ ಕೈಯಿಂದ ದುಡ್ಡು ಕಲೆಕ್ಟ್ ಮಾಡಿ ಶಾಲೆಯ ಕಚೇರಿಗೆ ಕೊಡಬೇಕಾಗಿತ್ತು. ಹಾಗೆ ಕಲೆಕ್ಟ್ ಮಾಡಿದ ದುಡ್ಡು ಅಂದು ಅವರ ಬ್ಯಾಗ್ ಅಲ್ಲಿತ್ತು. ಎಲ್ಲವೂ ಒಂದು ಎರಡು ರೂಪಾಯಿಯ ನೋಟುಗಳು! ನನ್ನ ಪುಟ್ಟ ತಲೆಗೆ ಅಷ್ಟೊ ನೋಟುಗಳನ್ನು ಕಂಡು ಅಚ್ಚರಿಯೆನಿಸಿರಬೇಕು. ಮರದ ಉದ್ದ ಸ್ಟಾಂಡ್ ಅಲ್ಲಿ ನನ್ನ ಮತ್ತು ಅಕ್ಕನ ಬ್ಯಾಗು ಇಡುತ್ತಿದ್ದೆವು. ಅಲ್ಲಿಗೆ ಹೋಗಿ, ನನ್ನ ಚೀಲ ಎತ್ತಿಕೊಂಡು ಬಂದು, ನನ್ನ ಕೈಗಳಿಗೆ ಅದೆಷ್ಟು ಹಿಡಿಯುತ್ತೋ ಅಷ್ಟೊ ನೋಟುಗಳನ್ನು ಮುದ್ದೆ ಮುದ್ದೆ ಮಾಡಿ ಚೀಲಕ್ಕೆ ತುರುಕುತ್ತಿದ್ದೆ.

ಒಂದಷ್ಟು ತುರುಕಿಯಾಗಿರಬೇಕು, ಬೆನ್ನ ಮೇಲೆ ಧಬ್ ಅಂತ ಪೆಟ್ಟು ಬಿತ್ತು! ನೋವಾಗಿ ಹಿಂತಿರುಗಿ ನೋಡಿದರೆ ಅಮ್ಮ ನಿಂತಿದ್ದಾರೆ. ಹಿತ್ತಲಲ್ಲಿ ಬಟ್ಟೆ ಒಗೆಯುತ್ತಿದ್ದ ಅಮ್ಮನಿಗೆ, ಏನಿವತ್ತು ಇವಳು ಇನ್ನೂ ಎದ್ದಿಲ್ಲ ಅನಿಸಿ ಬಂದು ನೋಡಿದರೆ ನಾನು ಜಗತ್ ವಿಖ್ಯಾತ ಕಳ್ಳಿಯಾಗುವ ಎಲ್ಲಾ ಪ್ರಯತ್ನಗಳನ್ನು ಮಾಡ್ತಾ ಇದ್ದೀನಿ! ಅವತ್ತು ಸರಿಯಾಗಿ ಪೆಟ್ಟು ತಿಂದಿದ್ದೆ. ಮೊದಲೇ ಎಷ್ಟು ಮಾಡಿದರೂ ಮುಗಿಯದ ಮನೆ ಕೆಲಸಗಳು, ಜವಾಬ್ದಾರಿಗಳು, ಅಣ್ಣ ಬೇರೆ ದೂರದ ಊರಲ್ಲಿರುವುದು. ಇದರ ಮೇಲೆ ನನ್ನ ಈ ಕಳ್ಳತನ, ಪಾಪ ಅಮ್ಮ! ಎಷ್ಟು ಬೇಜಾರಾಗಿರಬೇಕು. ಅವತ್ತು ಇಡೀ ವಠಾರದಲ್ಲಿ ಗಿರಿಜಾ ಟೀಚರ್ ಮಗಳು ಬ್ಯಾಗಿಗೆ ದುಡ್ಡು ತುರುಕಿದ್ದೇ ಕಥೆ! ಮೂರನೇ ಮನೆ ಸತ್ಯ ನಾರಾಯಣ ಮಾಮ–ನೇತ್ರಾ ಆಂಟಿ, ಕೊನೆ ಮನೆಯಲ್ಲಿದ್ದ ಶಾರದಾ ಆಂಟಿ ಮತ್ತವರ ಗಂಡ ಪಳನಿ ಮಾಮ (ಅವರಿಗೆ ನಾನು ಕರಿಯುತ್ತಿದ್ದದ್ದು ಪಣ್ಣನಿಳಿ ಮಾಮ ಎಂದೇ), ಮತ್ತೆ ಪಕ್ಕದ ಕಾಂಪೌಂಡ್ ಅಲ್ಲಿದ್ದ ಸಾವಿತ್ರಿ ಟೀಚರ್, ಭಾನುಮತಿ ಆಂಟಿ, ಶಿವಣ್ಣ ಮಾಮ ಎಲ್ಲರೂ ಅಂದು ಬುದ್ಧಿ ಹೇಳಿದ್ದೇ ಹೇಳಿದ್ದು. ನಾನು, ತಲೆ ತಗ್ಗಿಸಿ ನಾಚಿಕೆಯಿಂದಲೂ ಬೇಜಾರಿಂದಲೂ ತಲೆಯಾಡಿಸಿದ್ದೂ ಆಯಿತು. ಕೊನೆಗೆ ಭಾನುಮತಿ ಆಂಟಿ ಕೇಳಿದ್ದಕ್ಕೆ ಹಣೆಬೊಟ್ಟು ತೊಗೊಳ್ಳೋಕೆ ದುಡ್ಡು ತೆಗೆದೆ ಅಂದಿದ್ದೆ. ವಾರದ ಕೊನೆಗೆ ಅಣ್ಣ ಬಂದಾಗ ಕಣ್ಣಲ್ಲಿ ನೀರು ಸುರಿಸಿ ಅಳುವಂತೆ ಹೊಡೆದಿದ್ದರು. ಅದೇ ಕೊನೆ, ಅಮ್ಮನ ಬ್ಯಾಗಿರಲಿ, ಇಂದಿಗೂ ಯಾರ ಬ್ಯಾಗೂ ಮುಟ್ಟುವ ಸಾಹಸಕ್ಕೆ ಹೋಗುವುದಿಲ್ಲ! 'ಧೂಮ್' ಚಿತ್ರದಲ್ಲಿ ಹ್ಯಾಂಡ್ಸಮ್ ಕಳ್ಳ ಹೃತಿಕ್ ಅನ್ನು ನೋಡುವಾಗೆಲ್ಲ, ಒಂದು ಕ್ಷಣ 'ಛೆ! ನನ್ನ ಕರಿಯರ್ ಹಾಳಾಯ್ತಲ್ಲ, ಇಂಟರ್ ನ್ಯಾಷನಲ್ ಕಳ್ಳಿಯಾಗುವ ಅವಕಾಶ ತಪ್ಪಿ ಹೋಯ್ತಲ್ಲ' ಅನಿಸುತ್ತದೆ!.

ಮೂರನೇ ಕ್ಲಾಸಿಗೆ ಕಾಲಿಟ್ಟಿದ್ದೆ, ನನ್ನ ಪಕ್ಕ ಕೂರಲು ಒಬ್ಬಳು ಹೊಸ ಹುಡುಗಿ ಬಂದಿದ್ದಳು. ಅವಳಿಗೆ ಇಬ್ಬರು ಅಮ್ಮಂದಿರು. ಇವಳ ಚಿಕ್ಕಮ್ಮನ ಮಕ್ಕಳಿಗೆ ಸಿಕ್ಕಿದಷ್ಟು